**ಓ.ಎಸ್. 612/2013 ಪಿ.ಡಬ್ಲೂ–2 ಹೆಸರು – ಬಷೀರ್ ಅಹಮ್ಮದ್**

**ಸಾಕ್ಷಿಯನ್ನು ದಿನಾಂಕಃ 20.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1(d)(f)(h) ಪರ ಶ್ರೀಮತಿ ಎಂ.ಎಂ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹಾಕಿರುವ ರುಜು ನನ್ನದು. ವಾದಿ ನನ್ನ ತಂದೆ. ವಾದಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ ಹಾಗೂ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎನ್ನುವುದರ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಈ ದಾವೆಯಲ್ಲಿ ನಾನು ಜಿ.ಪಿ.ಎ ದಾರನಾಗಿ ಮುಖ್ಯ ವಿಚಾರಣೆ ನೀಡುತ್ತಿದ್ದೇನೆ. 1 ನೇ ಪ್ರತಿವಾದಿ ನನ್ನ ತಂದೆಯ ಹಿರಿಯ ಸಹೋದರ ಎಂಬುದರ ಬಗ್ಗೆ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯ ತಂದೆಯ ಹೆಸರು ಅಹಮ್ಮದ್ ಖಾನ್. ನಮ್ಮ ತಾತನವರು ಆಸ್ತಿಯನ್ನು ಮುಸ್ತಫಾ ಖಾನ್, ಮದಿನಾಭಿ ಮತ್ತು ಅಹಮ್ಮದ್ ಖಾನ್ ರವರ ನಡುವೆ ವಿಭಜನೆ ಮಾಡಿರುತ್ತಾರೆ. ನಮ್ಮ ತಾತನವರು ಮಕ್ಕಳ ಒತ್ತಡದಿಂದ ವಿಭಜನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ವಿಭಜನೆಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಮುಸ್ತಫಾ ಖಾನ್ ನನ್ನ ದೊಡ್ಡಪ್ಪ. ಮದಿನಾಭಿ ನನ್ನ ಚಿಕ್ಕಮ್ಮ. ಮುಸ್ತಫಾಖಾನ್ ರವರು ತಮ್ಮ ಭಾಗದ ಆಸ್ತಿಯನ್ನು ಮದಿನಾಭಿ ರವರಿಗೆ ಮಾರಾಟ ಮಾಡಿರುತ್ತಾರೆ. ಯಾವ ಇಸವಿಯಲ್ಲಿ ಮಾರಾಟ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ. ಮದಿನಾಭಿ ರವರು ನಂಜನಗೂಡಿನಲ್ಲಿ ವಾಸವಿದ್ದಾರೆ. ಮುಸ್ತಫಾ ಖಾನ್ ರವರು ಮೈಸೂರಿನಲ್ಲಿ ವಾಸವಿದ್ದರು. ಮುಸ್ತಫಾಖಾನ್ ಹಾಗೂ ಮದಿನಾಭಿ ರವರ ಮಕ್ಕಳು ಜೀವಂತವಿದ್ದಾರೆ.

ನನ್ನ ತಾತನ ಜಮೀನಿನ ಸರ್ವೆ ನಂ. ನನಗೆ ನೆನಪಿಲ್ಲ. ಅದು 3 ಎಕರೆ 30 ಗುಂಟೆ ಜಮೀನಾಗಿತ್ತು. ಸದರಿ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. 1 ನೇ ಪ್ರತಿವಾದಿ ತನಗೆ ಬಂದಂತಹ ಆಸ್ತಿಯನ್ನು ನನ್ನ ತಂದೆಗೆ ಕ್ರಯ ಮಾಡಿದ್ದು ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ನನ್ನ ದೊಡ್ಡಪ್ಪನ ಮಗ. ನಮ್ಮ ತಾತನ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಯಾವ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ನನಗೆ

ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮಕ್ಕಳು ಹಾಗೂ ಮೊಮ್ಮಕ್ಕಳು ಇದ್ದಾರೆ ಎಂದರೆ ಸರಿ. ನನ್ನ ತಂದೆಯ ಆಸ್ತಿಯಲ್ಲಿ ನನಗೆ ಭಾಗವಿದ್ದು ಅದು ನನಗೆ ಬರುತ್ತದೆ.

ನನ್ನ ತಂದೆ ಮದಿನಾಭಿ ರವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆ 1 ನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದ ಆಸ್ತಿಯನ್ನು ಅವರ ಸ್ವ ಇಚ್ಛೆಯಿಂದ ಅವರಿಗೆ ವಾಪಸ್ಸು ನೀಡಿದ್ದಾರೆ ಎಂದರೆ ಸರಿ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ತನ್ನ ಮಗನಾದ 2 ನೇ ಪ್ರತಿವಾದಿಗೆ ನೀಡಿದ್ದು ಅದು ಯಾವ ಮುಖಾಂತರ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ 4 ಜನ ಮಕ್ಕಳು. ನಾಲ್ಕು ಮಕ್ಕಳ ಪೈಕಿ ಕೇವಲ 2 ನೇ ಪ್ರತಿವಾದಿಗೆ ಮಾತ್ರ ದಾವಾ ಸ್ವತ್ತನ್ನು ನೀಡಿರುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಪಿ. ಕಾಂತರಾಜು ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ. ಪ್ರಸ್ತುತ ಕಾಂತರಾಜು ರವರು ಮೃತಪಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಕಾಂತರಾಜು ರವರ ಹೆಂಡತಿಯನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ. ದಾವಾ ಸ್ವತ್ತನ್ನು ನಮಗೆ ಕೊಡಬೇಕೆಂದು 2 ನೇ ಪ್ರತಿವಾದಿಗೆ ತಿಳಿಸಿದ್ದು ದಾವಾ ಸ್ವತ್ತಿನ ಅಕ್ಕಪಕ್ಕ ನಮ್ಮದೇ ಜಮೀನು ಇದ್ದು ದಾವಾ ಸ್ವತ್ತು ನಮಗೆ ಕೊಡಬೇಕು ಎಂದು ಈ ಪ್ರಕರಣವನ್ನು 3 ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಲಾಗಿದೆ.

ನಾವು ಇಸ್ಲಾಂ ಧರ್ಮದ ಸುನ್ನಿ ಪದ್ಧತಿಯನ್ನು ಪಾಲನೆ ಮಾಡುತ್ತಿದ್ದೇವೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**